ಕೂಡ ಮುಡಿ ಕೊಡುತ್ತಾರೆ. ದೇವರನ್ನು ಮೆಚ್ಚಿಸಲು ಬೇಡರ ಕಣ್ಣಪ್ಪನಂತೆ ಎಲ್ಲರೂ ಕಣ್ಣಗಳನ್ನು ಕೊಡಲಾಗುವುದಿಲ್ಲ. ಹಾಗಾಗಿ ಹೋದರೂ ಮತ್ತೆ ಬೆಳೆಯುವ ನಿರ್ಜೀವ, ನಿರಪರಾಧಿ ಕೂದಲನ್ನು ದೇವರಿಗೆ ಅರ್ಪಿಸುತ್ತಾರೆ. ಈ ಕೂದಲನ್ನು ದೇವರು ತೆಗೆದುಕೊಂಡು ಏನು ಮಾಡುತ್ತಾನೋ ಗೊತ್ತಿಲ್ಲ. ಆದರೆ, ತಿರುಪತಿಯಂತಹ ಸ್ಥಳಗಳಲ್ಲಿ ಯಃಕಶ್ಚಿತ್ ಎಂದು ಕರೆಯಲಾಗುವ ಈ ಕೂದಲು ಕೋಟ್ಯಂತರ ರೂಪಾಯಿ ಆದಾಯವನ್ನು ದೇವಸ್ಥಾನಕ್ಕೆ ತಂದು ಕೊಡುತ್ತಿದೆ. ಹೀಗಾಗಿ ಕೂದಲ ಬಗ್ಗೆ ಹಗುರವಾಗಿ ಮಾತನಾಡುವುದನ್ನು ಜನ ಇನ್ನಾದರೂ ಬಿಡಬೇಕು.

ನಾವು ಚಿಕ್ಕವರಿದ್ದಾಗ ಮಂಗಳವಾರ ತಲೆಚೌರ ಮಾಡಿಕೊಳ್ಳಬಾರದೆಂದು ನಮ್ಮ ಮನೆಯಲ್ಲಿ ಹಿರಿಯರ ಹುಕುಂ ಇತ್ತು. ಆದರೆ, ಮಂಗಳವಾರ ಕ್ಷೌರಿಕ ಬಿಡುವಾಗಿದ್ದು, ಬಹಳ ಗಮನ ಕೊಟ್ಟು ಕೂದಲನ್ನು ಕತ್ತರಿಸುತ್ತಾನೆಂಬ ನಂಬಿಕೆಯಿಂದಲೂ, ನಾನು ಮೂಢನಂಬಿಕೆಯ ವಿರೋಧಿ ಎಂದು ತೋರಿಸಿಕೊಳ್ಳಲೂ ಮಂಗಳವಾರವನ್ನೇ ನನ್ನ ಕ್ಷೌರಕ್ಕೆ ಆಯ್ಕೆ ಮಾಡಿಕೊಳ್ಳುತ್ತಿದ್ದೆ.

ಕಾಲೇಜಿನಲ್ಲಿ ಓದುತ್ತಿದ್ದಾಗ ದಟ್ಟವಾಗಿ, ಚೂಪಾಗಿ ಯಾವಾಗಲೂ ನಿಂತಿರುತ್ತಿದ್ದ ನನ್ನ ತಲೆಗೂದಲು ಯಾವಾಗಲೂ ಸ್ನೇಹಿತರ ಹಾಸ್ಯಕ್ಕೆ ವಸ್ತುವಾಗಿತ್ತು. ಪಾಪ ಇವನಿಗೆ ಹೇರ್ ಇದೆ ಆದರೆ ಸ್ಟೈಲ್ ಇಲ್ಲ ಎಂದೂ, ಮುಳ್ಳುಹಂದಿಯ ರೀತಿಯಲ್ಲಿ ತಲೆಗೂದಲು ಇದೆಯೆಂದೂ, ತಲೆಗೆ ಕೈ ಇಟ್ಟರೆ ಕೂದಲು ಚುಚ್ಚಿ ಗಾಯವಾಗುತ್ತದೆಯೆಂದೂ ಸ್ನೇಹಿತರು ಹಾಸ್ಯ ಮಾಡುತ್ತಿದ್ದರು. ನಾನು ತಲೆಕ್ಷೌರಕ್ಕೆ ಹೋದರೆ ಮುಖ್ಯಕ್ಷೌರಿಕ ಇತರೆ ಟ್ರೈನಿ ಕ್ಷೌರಿಕರನ್ನು ಕರೆದು ನನ್ನ ತಲೆಯನ್ನು ಅಂತಿಮ ಪರೀಕ್ಷೆಯ ಪ್ರಶ್ನೆಪತ್ರಿಕೆಯ ರೀತಿ ಅವರಿಗೆ ತೋರಿಸಿ, ಇದನ್ನು ಸರಿಯಾಗಿ ನೀಟಾಗಿ ಕಟಾವು ಮಾಡಿದರೆ ಮುಂದೆ ನೀವು ಸ್ವತಂತ್ರವಾಗಿ ಕೂದಲು ಕತ್ತರಿಸಬಹುದೆಂದೂ, ಬಹಳಷ್ಟು ಮಂದಿ ಈ ಕ್ಲಿಷ್ಟಕರ ಪರೀಕ್ಷೆಯಲ್ಲಿ ಅನುತ್ತೀರ್ಣರಾಗುವರೆಂದೂ ಹಾಸ್ಯ ಮಾಡುತ್ತಿದ್ದರು.

ಕೆಲವರು ತಲೆಯಲ್ಲಿ ಕೂದಲು ಕಡಿಮೆಯಾದರೇನಂತೆ ಅದರ ಕೊರತೆಯನ್ನು ಗಡ್ಡ– ಮೀಸೆಗಳಲ್ಲಿ ಸರಿದೂಗಿಸುತ್ತೇನೆ ಎಂದು ಮೀಸೆ ಗಡ್ಡಗಳನ್ನು ಉದ್ದಕ್ಕೆ ಬಿಡುವರು. ಇನ್ನೂ ಕೆಲವರು ತಲೆಯಲ್ಲಿ ಉಳಿದ ಅಲ್ಪಸ್ವಲ್ಪ ಕೂದಲು ಮೀಸೆ, ಗಡ್ಡ ಎಲ್ಲವನ್ನೂ ಬೋಳಿಸಿಕೊಂಡು ಬೋಡಪ್ಪಗಳಾಗುವರು. ಕೆಲವರು ಮೀಸೆಯನ್ನು ಹಳೆಯ ಕಾಲದ ನಟರು ಬಿಟ್ಟಂತೆ ಹಂಚಿಕಡ್ಡಿಯಂತೆ ತೆಳುವಾಗಿ ಬಿಟ್ಟರೆ, ಇನ್ನು ಕೆಲವರು ವೀರಪ್ಪನ್‌ನಂತೆ ಪೊದೆಮೀಸೆ ಬಿಡುತ್ತಾರೆ. ವೀರಪ್ಪನ್ ಅಂತೂ ತನ್ನ ವಿಶಿಷ್ಟವಾದ ಪೊದೆಮೀಸೆಯಿಂದಲೇ ಗುರುತಿಸಲ್ಪಡುತ್ತಿದ್ದ. ಯಾವುದೇ ಕಾರಣಕ್ಕೂ ಮೀಸೆಯನ್ನು ತಾನು ಕತ್ತರಿಸಲಾರೆ ಎಂದು ಆತ ಸಾಯುವವರೆಗೂ ಅದರ ಮೇಲೆ ಯಾರದ್ದು ಕೈ ಬೀಳದಂತೆ ನೋಡಿಕೊಂಡಿದ್ದ. ಅದೇ ರೀತಿ ತಮ್ಮ ವಿಶಿಷ್ಟವಾದ ಮೀಸೆಯಿಂದ ಗುರುತಿಸಿಕೊಂಡವರೆದರೆ ಜರ್ಮನಿಯ ಸರ್ವಾಧಿಕಾರಿ ಹಿಟ್ಲರ್ ಮತ್ತು ಜಗತ್ತಿನ ಹಾಸ್ಯ ಚಕ್ರವರ್ತಿ ಚಾರ್ಲಿ ಚಾಪ್ಲಿನ್.

ಮೀಸೆಯ ರೀತಿ ವಿಶಿಷ್ಟವಾಗಿ ಗಡ್ಡ ಬಿಡುವುದೂ ಕೂಡ ಒಂದು ಟ್ರೆಂಡ್. ಅದರಲ್ಲಿ ಫ್ರೆಂಚ್ ಗಡ್ಡ (ಫ್ರೆಂಚಿ) ಬಿಡುವವರದ್ದು ಒಂದು ಪ್ರತ್ಯೇಕ ಗುಂಪೇ ಇದೆ. ಈ ಫ್ರೆಂಚ್ ಗಡ್ಡಕ್ಕೆ ವಿಜ್ಞಾನಿಗಳು, ಮನೋವೈದ್ಯರು ಹಾಗೂ ಪ್ರಖ್ಯಾತ ಬಾಲಿವುಡ್ ತಾರೆ ಅಮಿತಾಬ್ ಬಚ್ಚನ್ ರಾಯಭಾರಿಗಳೇನೋ ಎನ್ನುವಷ್ಟರಮಟ್ಟಿಗೆ ಆ ಗಡ್ಡಕ್ಕೂ ಹಾಗೂ ಇವರಿಗೂ ಒಂದು ಗಾಢವಾದ ನಂಟಿದೆ.

ನಾವು ಶಾಲೆಗೆ ಹೋಗುವ ಅಂದಿನ ಕಾಲದಲ್ಲಿ ತಲೆಗೆ ಸೊಂಪಾಗಿ ಹರಳೆಣ್ಣೆ ಮೆತ್ತಿಸಿಕೊಂಡು, ನೀಟಾಗಿ ಕ್ರಾಪ್ ತೆಗೆದುಕೊಂಡು ಶಾಲೆಗೆ ಹೋಗುತ್ತಿದ್ದೆವು. ಎಷ್ಟೋ ಬಾರಿ ತಾಯಂದಿರು 'ನಮ್ಮ ಮಕ್ಕಳ ನೆತ್ತಿ ತಂಪಾಗಿರಲಿ' ಎಂದು ಪ್ರೀತಿಯಿಂದ ಸ್ವಲ್ಪ ಹೆಚ್ಚಾಗಿ ಹಾಕಿದ ಹರಳೆಣ್ಣೆಯು ಸರ್ಕಾರದ ಹಣ ಸೋರಿಕೆಯಾಗುವಂತೆ ಹಣೆ, ಕಿವಿ ಮತ್ತು ತಲೆಯ ಹಿಂಭಾಗದ ಮೂಲಕ ಬಟ್ಟೆಗಳ ಮೇಲೆ ಸೋರಿಕೆಯಾಗುತ್ತಿತ್ತು. ಇಂತಹ ದೃಶ್ಯಗಳು ಈಗಿನ ಕಾಲದಲ್ಲಿ ಕಾಣುವುದು ಕಷ್ಟ. ಆಗ ಎಲ್ಲರ ಮನೆಯಲ್ಲೂ ಶಾಲೆಗೆ ಕಳಿಸುವ ಮುಂಚೆ ಮಕ್ಕಳನ್ನು, ಅವರು ಒಪ್ಪಲಿ ಬಿಡಲಿ ತಾಯಂದಿರು ಜುಟ್ಟು ಹಿಡಿದುಕೊಂಡು, ನೆತ್ತಿ ತಂಪಾಗಲೆಂದು ತಲೆಗೆ ಹರಳೆಣ್ಣೆ ಹಚ್ಚುತ್ತಿದ್ದರು. ತಲೆಯಲ್ಲಿರಬಹುದಾದ